

## ಜಾತಿಯಿಲ್ಲದ ಭೀತಿಯಿಲ್ಲದ 'ಆರ್ಯಸಮಾಜ'

ಹಿಂದೂ ಸಮಾಜ ಬಹುದೊಡ್ಡ ಸಂಖ್ಯೆಯಲ್ಲಿ ಜನರನ್ನು ಕೆಳಸ್ತರದಲ್ಲಿಟ್ಟು ಶೋಷಿಸಿ ಅವರನ್ನು 'ಅಸ್ಪೃಶ್ಯರು' ಎಂದು ಕರೆಯಿತು. ಈ 'ಕೆಳಜಾತಿ'ಯವರು ಊರಾಚೆಯಲ್ಲಿ ವಾಸಿಸಬೇಕು. ಊರು ಬೆಳೆದಾಗ, ಇವರನ್ನು ಹೊರಹಾಕಿ ಮತ್ತಷ್ಟು ದೂರಕ್ಕೆ ತಳ್ಳುವುದನ್ನು ನನ್ನ ಬಾಲ್ಯದಲ್ಲಿ ಬಯಲುಸೀಮೆಯ ನನ್ನ ತಾತನ ಹಳ್ಳಿಯಲ್ಲಿ ಕೂಡ ಕಂಡಿದ್ದೆ. ಇನ್ನು ದಯಾನಂದರು ಜನಿಸಿ ಬದುಕಿದ 19ನೇ ಶತಮಾನದಲ್ಲಿ ಎಂತಹ ಪರಿಸ್ಥಿತಿ ಇತ್ತೆಂದು ಊಹಿಸಿಕೊಳ್ಳಬಹುದು.

ಈ ದಲಿತರು ಎಷ್ಟೇ ಪ್ರತಿಭಾಶಾಲಿಗಳಾಗಿರಲಿ, ಅವರಿಗೆ ಅವಕಾಶವಿಲ್ಲದೆ, ಬೆಂಬಲವಿಲ್ಲದೆ, ಪೋಷಣೆ ಇಲ್ಲದೆ, ಪ್ರೋತ್ಸಾಹವಿಲ್ಲದೆ ಅವರ ಪ್ರತಿಭೆ ಧೂಳಿನ ಪಾಲು. ಹಣ ಸಂಪಾದನೆಯ ವೃತ್ತಿಗಳೆಲ್ಲ ಅವರಿಗೆ ಬಾಗಿಲು ಮುಚ್ಚಿವೆ. ಅತಿ ಕಡಿಮೆ ವೇತನದಲ್ಲಿ ಸಮಾಜದ ನಿಕೃಷ್ಟ ಸ್ವರೂಪದ ಕೆಲಸಗಳನ್ನು ಬೇರೆ ಹಾದಿಯೇ ಇಲ್ಲದೆ ಅನಿವಾರ್ಯದಲ್ಲಿ ಮಾಡಬೇಕಿತ್ತು. ದಯಾನಂದರು ಇಂತಹ ಪರಿಸ್ಥಿತಿ 'ದಲಿತರಿಗೆ' ಮಾತ್ರವಲ್ಲ, ಇಡೀ ರಾಷ್ಟ್ರಕ್ಕೆ ಘಾತಕವಾದದ್ದು ಎಂದು ಕಂಡುಕೊಂಡಿದ್ದರು.

ಹೀಗೆ ಹಿಂದೂಗಳದು ಹಲವು ಹತ್ತು ವಿಧದಲ್ಲಿ ಛಿದ್ರವಾದ ಸಮಾಜವಾಗಿತ್ತು. ಇದರ ಪರಿಣಾಮ, ಹೆಸರಿಗಷ್ಟೇ 'ಹಿಂದೂ ಸಮಾಜ' ಎನ್ನುವ ಸಮುದಾಯ ಒಂದಾಗಿರಲಿಲ್ಲ, ಸಹಸ್ರ ತುಂಡುಗಳಾಗಿ ನಿಂತಿತ್ತು. ಈ ತುಂಡುಗಳನ್ನು ಯಾರೂ ಕೂಡಾ ಸುಲಭವಾಗಿ ಮತಾಂತರಗೊಳಿಸಬಹುದಿತ್ತು. ಹಿಂದೂ ಸಮಾಜದಲ್ಲಿ ಶೂದ್ರರನ್ನು, ಅದರಲ್ಲೂ ದಲಿತರನ್ನು ಇಷ್ಟು ಹೀನಾಯವಾಗಿ ನಡೆಸಿಕೊಳ್ಳುವಾಗ, ಅವರು ಬೇರೆ ಧರ್ಮಗಳತ್ತ ಆಕರ್ಷಿತರಾಗುವುದು ಸಹಜವೇ ಆಗಿತ್ತು, ಮಾನವೀಯವೂ ಆಗಿತ್ತು.

ಈ ಎಲ್ಲ ಶೋಷಣೆಗೆ ಪೌರಾಣಿಕ ಪಂಡಿತರು, ಅವರು ಹೇಳುವ ದೇವ ದೇವತೆಗಳು, ಅವರು ವೇದಗಳಲ್ಲಿ ಇದೆಯೆಂದು ನಂಬಿಸುವ 'ಅಸತ್ಯಗಳು' ಕಾರಣ ಎಂದು ದಯಾನಂದರು ಗಮನಿಸಿದರು. ದಯಾನಂದರು ವೇದಗಳ ಆಳ ಅಧ್ಯಯನ ಮಾಡಿದ್ದರು. ತರ್ಕಶಾಸ್ತ್ರದಲ್ಲಿ ಅವರಿಗೆ ಪರಮ ಪಾಂಡಿತ್ಯವಿತ್ತು. ತಾವು ಕಾಣುತ್ತಿರುವ ಕೆಳಸ್ತರದ ಜನರ ಮತ್ತು ಸ್ತ್ರೀಯರ ಶೋಷಣೆಗೆ ವೇದಗಳಲ್ಲಿ